**DW-4:** ನಾರಾಯಣಪ್ಪ

ದಿನಾಂಕಃ **02.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿಯ ಪರವಾಗಿ ಶ್ರೀ ಐ.ಎಸ್.ಎ. ವಕೀಲರಿಂದಃ</u>

1. ನನ್ನ ತಾತ ಯಂಗಪ್ಪ ರವರಿಗೆ ಇಬ್ಬರೂ ಹೆಂಡತಿಯರವರು ಅವರ ಹೆಸರು ಗೊತ್ತಿಲ್ಲ. ಸಾಕ್ಷಿಯು ಮುಂದುವರೆ ಮೊದಲನೇ ಹೆಂಡತಿ ಹನುಮತಕ್ಕ 2 ನೇ ಹೆಂಡತಿ ಚೆನ್ನಮ್ಮ ಎಂದು ನುಡಿದಿರುತ್ತಾರೆ. ಹನುಮಕ್ಕ ರವರಿಗೆ 4 ಜನ ಮಕ್ಕಳು ಅವರೆಂದರೆ ವೆಂಕಟರಮಣಪ್ಪ, ಚಿನ್ನಪ್ಪ, ರಾಮಯ್ಯ ಮತ್ತು ಚೆನ್ನಪ್ಪ. ಅಕ್ಕಲಪ್ಪ ಮತ್ತು ಗುರ್ರಪ್ಪ. ಅಕ್ಕಲಪ್ಪ ರವರಿಗೆ ಸಂತತಿ ಇರುವುದಿಲ್ಲ. ಗುರ್ರಪ್ಪ ರವರಿಗೆ 7 ಜನ ಗಂಡು ಮಕ್ಕಳು ಅವರೆಂದರೆ ವೆಂಕಟಪ್ಪ, ಸುಬ್ಬಯ್ಯ, ವೆಂಕಟೇಶಪ್ಪ, ನಾರಾಯಣಪ್ಪ, ಆದಿಶೇಷಪ್ಪ, ನಾಗೇಂದ್ರಪ್ಪ ಮತ್ತು ಗೋವಿಂದಪ್ಪ ಆಗಿರುತ್ತಾರೆ. ಮೇಲ್ಕಂಡವರು ಸುಮಾರು 60-70 ವರ್ಷಗಳಿಂದ ಬೇರೆ ಬೇರೆ ವಾಸವಿದ್ದಾರೆ. ದಾವಾ ಸ್ವತ್ತುಗಳ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸ.ನಂ. 51 ಮತ್ತು 55 ರ ಸ್ವತ್ತಗಳನ್ನು ಭೀಮಪ್ಪ ರವರ ಮಕ್ಕಳು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ.

2. ಸ.ನಂ. 51 ರಲ್ಲಿ 33.17 ಎಕರೆ ಸ.ನಂ. 55 ರಲ್ಲಿ 34.17 ಎಕರೆ ಒಟ್ಟು 67 ಎಕರೆ 34 ಗುಂಟೆ ಆಸ್ತಿಯನ್ನು ಭೀಮಪ್ಪ ರವರ ಮಕ್ಕಳು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಗುರ್ರಪ್ಪ ರವರ ಮಕ್ಕಳು ಸ.ನಂ. 47, 139, 25, 40/2 ಮತ್ತು 30/1 ರ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಸ.ನಂ. 25 ಮತ್ತು 30/1 ರ 2 ಸ್ವತ್ತುಗಳನ್ನು ನಾವು ಮೈಸೂರು ಎಸ್ಟೇಟ್ ರವರಿಗೆ ಮಾರಿದ್ದೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಗೊತ್ತಿಲ್ಲ. ಯರ್ಾಪ್ಟೆ ಗ್ರಾಮಕ್ಕೆ ಸೇರಿದ ಸ.ನಂ. 120, 125, 124, 148 ಮತ್ತು 75 ರ ಆಸ್ತಿಗಳು ಭೀಮಪ್ಪ ರವರ ಮಕ್ಕಳ

ಸ್ವಯಾರ್ಜಿತ ಆಸ್ತಿಗಳು ಎಂದರೆ ಗೊತ್ತಿಲ್ಲ. ಯರ್ಾಫ್ಟೆ ಗ್ರಾಮದ ಸ.ನಂ. 57/4, 131, 201, 132 ಮತ್ತು 56/2 ರ ಆಸ್ತಿಗಳು ಗುರ್ರಪ್ಪ ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಬುಗಡೂರು ಗ್ರಾಮದ ಸರ್ವೇ ನಂಬರ್ ಗಳಲ್ಲಿ ನನಗೆ ಯಾವುದೇ ಭಾಗಾಂಶ ಇರುವುದಿಲ್ಲ. ಅದು ನನ್ನ ಸಹೋದರರಿಗೆ ಸೇರಿರುತ್ತದೆ. ಬುಗಡೂರು ಸ್ವತ್ತುಗಳನ್ನು ಖರೀದಿಸಿ ಎಷ್ಟು ವರ್ಷವಾಗಿದೆ ಗೊತ್ತಿಲ್ಲ.

3. ನಮ್ಮ ದೊಡ್ಡಮ್ಮ ಊಯಿಲು ಬರೆದಿರುವ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಮ್ಮ ಸ.ನಂ. 57, 55, 51, 47, 41 ಮತ್ತು 40 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ನನಗೆ ಊಯಿಲು ಬರೆದಿರುತ್ತಾರೆ. ಎಷ್ಟು ಎಕರೆ ವಿಸ್ತೀರ್ಣಕೆ ಊಯಿಲು ಬರೆದಿದ್ದಾರೆ ಗೊತ್ತಿಲ್ಲ. ಊಯಿಲು ಬರೆದ ದಿನಾಂಕಕ್ಕೆ ಸದರಿ ಸ್ವತ್ತುಗಳ ಖಾತೆ ಗಂಗಮ್ಮ ರವರ ಹೆಸರಿನಲ್ಲಿ ಇತ್ತೋ ಇಲ್ಲವೋ ಗೊತ್ತಿಲ್ಲ. ಅಕ್ಕಲಪ್ಪ ಮತ್ತು ಗುರ್ರಪ್ಪ ರವರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಅವರಿಬ್ಬರೂ ಸಮನಾಗಿ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿರುತ್ತಾರೆ. ಸ.ನಂ. 55 ರಲ್ಲಿ 3 ಎಕರೆ, ಸ.ನಂ. 51 ರಲ್ಲಿ 9 ಎಕರೆ, ಸ.ನಂ. 47 ರಲ್ಲಿ 17 ಎಕರೆ, ಸ.ನಂ. 40 ರಲ್ಲಿ 3 ಎಕರೆ, ಸ.ನಂ. 57 ರಲ್ಲಿ 16 ಎಕರೆ ಮತ್ತೊಂದು ಸರ್ವೇ ನಂಬರ್ 139. ಈ ಮೇಲೆ ಹೇಳಿದ 6 ಸರ್ವೇ ನಂಬರ್ ಸ್ವತ್ತುಗಳಲ್ಲಿ ಅಕ್ಕಲಪ್ಪ ರವರಿಗೆ ಮತ್ತು ಗುರ್ರಪ್ಪ ರವರಿಗೆ ತಲಾ ಅರ್ಧ ಹಿಸ್ಸೆ ಭಾಗವಾಗಿರುತ್ತದೆ.

4. ಸುಮಾರು 50 ವರ್ಷಗಳ ಹಿಂದೆ ಗಂಗಮ್ಮ ಊಯಿಲು ಬರೆದಿರುತ್ತಾರೆ. ನನ್ನ ತಂದೆ ಗುರ್ರಪ್ಪ ಮತ್ತು ದೊಡ್ಡಪ್ಪ ಅಕ್ಕಲಪ್ಪ ರವರ ನಡುವೆ ವಿಭಾಗ ಆಗಿರುವ ಬಗ್ಗೆ ವಿಭಾಗಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು ಊಯಿಲುಪತ್ರವನ್ನು ಓದಿಲ್ಲ. ಊಯಿಲು ಪತ್ರದ ಬಗ್ಗೆ ನನ್ನ ಅಣ್ಣ ನನಗೆ ಹೇಳಿರುತ್ತಾರೆ. ಊಯಿಲಿನಲ್ಲಿ ಗಂಗಮ್ಮ ರವರ ಸ್ವಾಧೀನದಲ್ಲಿ ಇರುವ ಸ್ವತ್ತುಗಳನ್ನು ನನಗೆ ನೀಡಿರುವುದಾಗಿ ಬರವಣಿಗೆ ಇದೆ ಎಂದರೆ ಸರಿ. ಸದರಿ ಊಯಿಲಿನಲ್ಲಿ ಗಂಗಮ್ಮ ತನ್ನ ಹಕ್ಕಿಗೆ ಒಳಪಟ್ಟ ಸ್ವತ್ತುಗಳನ್ನು ಬರೆದುಕೊಡುತ್ತಿದ್ದೇನೆ ಎಂದು ಬರವಣಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಗಂಗಮ್ಮ ರವರ ಮೃತಪಟ್ಟ ನಂತರ ಸ್ವತ್ತಿನ

ಸ್ವಾಧೀನವನ್ನು ಮಾತ್ರ ಮುಂದುವರೆಸಿಕೊಂಡು ಹೋಗಬೇಕೆ ವಿನಃ ಸ್ವತ್ತಿನ ಹಕ್ಕನ್ನು ವರ್ಗಾವಣೆ ಮಾಡಿಲ್ಲ ಎಂದರೆ ಸರಿಯಲ್ಲ.

5. ಹನುಮಕ್ಕ ರವರಿಗೆ ಭೀಮಪ್ಪ ಎಂಬ ಮಗನಿರುತ್ತಾನೆ ಎಂದರೆ ಸರಿ. ನಾನು ನೋಡಿರುವುದಿಲ್ಲ. ಭೀಮಪ್ಪ ರವರ 4 ಜನ ಮಕ್ಕಳು ತಮ್ಮ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರದ್ದಾರೆ ಎಂದರೆ ಸರಿ. ವೆಂಕಟರಮಣಪ್ಪ ರವರ ಮಕ್ಕಳು ತಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ಸಂಪೂರ್ಣವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ್ವಲ್ಪ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಮತ್ತು ಸ್ವಲ್ಪ ಉಳಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಅರ್ಧ ಭಾಗವನ್ನು ಮಾರಾಟ ಮಾಡಿದ್ದಾರೆ. ಸುಮಾರು 8 ಎಕರೆ ಮಾರಾಟ ಮಾಡಿದ್ದು ಉಳಿಕೆ ಸುಮಾರು 10 ಎಕರೆ ಇರುತ್ತದೆ. ಸದರಿ ಆಸ್ತಿ ಯಾರ ಸ್ವಾಧೀನದಲ್ಲೂ ಇಲ್ಲ ಬೀಡು ಇದೆ. ಚಿನ್ನಪ್ಪ ರವರ ಭಾಗಕ್ಕೆ ಬಂದ ಆಸ್ತಿಗಳನ್ನು ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸ.ನಂ. 51 ರಲ್ಲಿ 12 ಎಕರೆ ಮಾರಾಟ ಮಾಡಿದ್ದಾರೆ. ಉಳಿಕೆ ಸ್ವತ್ತು ಹಾಗೆ ಉಳಿದಿದೆ. ಚಿನ್ನಪ್ಪ ರವರ ಮಕ್ಕಳು ಸ್ವತ್ತನ್ನು ರಾಮಯ್ಯ ರವರ ಹೆಂಡತಿಯಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಚೆನ್ನಪ್ಪ ರವರಿಗೆ ಸಂತತಿ ಇರುವುದಿಲ್ಲ ಎಂದರೆ ಸರಿ. ಚೆನ್ನಪ್ಪ ರವರ ಭಾಗದ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಬೀಡು ಇರುತ್ತದೆ.

6. ರಾಮಯ್ಯ ರವರ ಭಾಗಕ್ಕೆ ಬಂದ ಸ್ವತ್ತುಗಳನ್ನು ಅವರ ಮಗ ವೆಂಕಟರಮಣಪ್ಪ ರವರು ಮಾರಾಟ ಮಾಡಿ ರೊಪ್ಪದಲ್ಲಿ ಬಂದು ನೆಲೆಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಾರಾಟ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಭೀಮಯ್ಯ ರವರ ಮಕ್ಕಳು ಎಲ್ಲಾ ಸ.ನಂ. ಗಳಲ್ಲಿ ಅನುಭವಿಸುತ್ತಿದ್ದಾರೆ ನಾವು ಅನುಭವಿಸುತ್ತಿದ್ದೇವೆ. ಸ.ನಂ. 51 ಮತ್ತು 55 ರಲ್ಲಿ ಭೀಮಪ್ಪ ರವರ ಮಕ್ಕಳು ಮಾತ್ರ ಅನುಭವಿಸುತ್ತಿದ್ದು ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಉಳಿಕೆ ಸ.ನಂ. 47, 139, 25, 40/2 ಮತ್ತು 30/1 ರ ಸ್ವತ್ತುಗಳಲ್ಲಿ ಗುರ್ರಪ್ಪ ರವರ ಮಕ್ಕಳು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 51 ಮತ್ತು 55 ಅನ್ನು ಭೀಮಪ್ಪ ರವರ ಮಕ್ಕಳು ಮಾರಾಟ

ಮಾಡಿದ್ದು ಸ.ನಂ. 47, 139, 25, 40/2 ಮತ್ತು 30/1 ಗಳನ್ನು ಗುರ್ರಪ್ಪ ರವರ ಮಕ್ಕಳು ಅನುಭವಿಸುತ್ತಿದ್ದು ಅವರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.